## ಶತಮಾನದ ಹಿಂದಿನ ರಾಮ ವಿಗ್ರಹ

ರಾಮನವಮಿಯಂದು ಪೂಜಿಸಲು ದೇವತಾ ಮೂರ್ತಿಯ ಅಗತ್ಯವಿತ್ತು. ದೇವರ ಸಾಮಾನುಗಳಿಟ್ಟಿದ್ದ ಪುಟ್ಟ ಖಜಾನೆ ತೆರೆದಾಗ ರಾಮ ದೇವರ ಈ ವಿಗ್ರಹ ಗೋಚರಿಸಿತು. ನಮ್ಮ ವಂಶದ ಪೂರ್ವಿಕರು ಬಳಸುತ್ತಿದ್ದ, ಶತಮಾನದ ಹಿಂದಿನ ಈ ಸುಂದರ ಮೂರ್ತಿ ಕಣ್ಮನ ಸೆಳೆಯಿತು. ಶ್ರೀರಾಮ, ವಾಮ ಪಾರ್ಶ್ವದಲ್ಲಿ ಸೀತಾಮಾತೆ ಹಾಗೂ ಬಲ ಭಾಗದಲ್ಲಿ ಕೈಮುಗಿದು ನಿಂತ ಲಕ್ಷ್ಮಣ ಮತ್ತು ಹನುಮ ಈ ನಾಲ್ವರ ಮೂರ್ತಿಗಳೂ ಒಂದೇ ಪೀಠದ ಮೇಲೆ ಸ್ಥಿತಗೊಂಡಿವೆ. ಭಕ್ತಿಭಾವ ಮೂಡಿಸುವ ಈ ಸುಂದರ ಪ್ರತಿಮೆಗಳು ಕಲಾತ್ಮಕವಾಗಿಯೂ ಇವೆ. ಪೀಠ ಹಾಗೂ ಪ್ರಭಾವಳಿಯಲ್ಲಿ ಬಳ್ಳಿಯಾಕಾರದ ವಿನ್ಯಾಸವಿದೆ. ಪೀಠದ ನಡುಭಾಗದಲ್ಲಿ ಗಂಡಭೇರುಂಡ ಪಕ್ಷಿಯನ್ನು ಚಿತ್ರಿಸಿರುವುದು ವಿಶೇಷ. ಲಕ್ಷ್ಮಣ ಧನುರ್ಧಾರಿಯಾಗಿಲ್ಲದಿರುವುದೂ ಸಹ ವಿಶೇಷವೇ. ನಾಲ್ಕು ಕಂಬಗಳ ಆಸರೆ ಪಡೆದಿರುವ ಅರ್ಧ ಚಂದ್ರಾಕೃತಿಯ ಪ್ರಭಾವಳಿಯನ್ನು ಬೇರ್ಪಡಿಸಬಹುದು. ಇದರಿಂದಾಗಿ ವಿಗ್ರಹಗಳನ್ನು ಶುಭ್ರಗೊಳಿಸುವುದು ಸುಲಭ.

—ಮಂಜುನಾಥ ಡಿ. ಎಸ್., ಬೆಂಗಳೂರು






## ಭಕ್ತರು ರಾಮನಿಗೆ ನೀಡಿದ ಗಂಟೆ!

ಇಷ್ಟು ದೊಡ್ಡ ಗಂಟೆ ಎಲ್ಲಿಯದು ಎಂದು ಆಶ್ಚರ್ಯ ಪಡುತ್ತೀರೇನೋ! ಅಯೋಧ್ಯೆಯಲ್ಲಿ ರಾಮ ಜನ್ಮಭೂಮಿ ಟ್ರಸ್ಟ್ ವತಿಯಿಂದ ನಿರ್ಮಾಣವಾಗುತ್ತಿರುವ ರಾಮ ಮಂದಿರದಲ್ಲಿ ಅಳವಡಿಸಲು ಸಿದ್ಧಗೊಂಡಿರುವ ಗಂಟೆ ಇದು. ಭವಿಷ್ಯದಲ್ಲಿ ನಿರ್ಮಾಣವಾಗಲಿರುವ ರಾಮ ಮಂದಿರಕ್ಕೆ ಭಕ್ತಾದಿಗಳು ಈಗಾಗಲೇ ಬೃಹತ್ ಗಂಟೆಯೊಂದನ್ನು ಅರ್ಪಣೆ ಮಾಡಿದ್ದಾರೆ. ಸದ್ಯ, ಅದನ್ನು ಹತ್ತಿರದ ರಾಮ ಲಲ್ಲಾದಲ್ಲಿ ಪ್ರದರ್ಶನಕ್ಕಿಡಲಾಗಿದೆ.

—ಎಂ.ಎಸ್. ರಘುನಾಥ್, ಬೆಂಗಳೂರು

## ಎಣ್ಣೆ ಗಿಂಡಿ!



ನಮ್ಮ ಹಿರಿಯರು ಪ್ರತಿಯೊಂದು ವಸ್ತುಗಳನ್ನು ಇಟ್ಟುಕೊಳ್ಳಲು ವಿಭಿನ್ನವಾದ ಪರಿಕರಗಳನ್ನು ಬಳಕೆ ಮಾಡುತ್ತಿದ್ದರು. ಅದರಲ್ಲಿ ಕೊಬ್ಬರಿ ಎಣ್ಣೆ ತುಂಬುವ ಗಿಂಡಿ ಸಹ ಒಂದು. ಈ ವಿಶಿಷ್ಟ ಪರಿಕರವನ್ನು ತಾಮ್ರದಿಂದ ತಯಾರಿಸಲಾಗಿದೆ. ಸುಮಾರು 200 ವರ್ಷದ ಹಳೆಯದಾದ ಈ ಗಿಂಡಿಯು ಇಂದಿಗೂ ಯಥಾಸ್ಥಿತಿಯಲ್ಲಿದೆ. ಹೆಚ್ಚು ತೂಕವುಳ್ಳ ಈ ಎಣ್ಣೆ ಗಿಂಡಿಯು ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲ್ಲೂಕಿನ ಮಾಗೋಡ ಸಮೀಪದ ಹಂದಿಮನೆಯ ನರಸಿಂಹ ಮಾಬ್ಲೇಶ್ವರ ಹೆಗಡೆ ಅವರ ಮನೆಯಲ್ಲಿದೆ. ಈ ಕಾಲದಿಂದಲೂ ಅವರ ಮನೆಯಲ್ಲಿ ಕೊಬ್ಬರಿ ಎಣ್ಣೆ ತುಂಬಿಡಲು ಈ ಗಿಂಡಿಯನ್ನೇ ಉಪಯೋಗ ಮಾಡುವ ಪದ್ಧತಿ ಚಾಲ್ತಿಯಲ್ಲಿದೆ.

—ಗಣಪತಿ ಹಾಸ್ಪುರ, ಯಲ್ಲಾಪುರ

## ನೀವೂ ಬರೆಯಿರಿ

'ಸುಧಾ' ವಾರಪತ್ರಿಕೆಯಲ್ಲಿ ಪ್ರಕಟವಾಗುವ 'ನಿಮ್ಮ ಪುಟ' ಓದುಗರ ಅಂಕಣಕ್ಕೆ ನಿಮ್ಮ ಸುತ್ತಮುತ್ತಲಿನ ವಿಶೇಷ ಸಂಗತಿಗಳ ಬಗ್ಗೆ ನೂರು ಪದಗಳ ಬರಹ ಮತ್ತು ಅದಕ್ಕೆ ಸಂಬಂಧಿಸಿದ ಚೆಂದದ ಫೋಟೊವನ್ನು ನಮಗೆ ಕಳುಹಿಸಿಕೊಡಿ.

**ವಿಳಾಸ:** editorsu@sudha.co.in

@SudhaWeekly